ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಜಿಲ್ಲಾ ನ್ಯಾಯಾಲಯದ ಆವರಣ, ಚಾಮರಾಜನಗರ
**DISTRICT LEGAL SERVICES AUTHORITIES,**
DISTRICT COURT COMPLEX, CHAMARAJANAGAR
Email. Id: dlsachnagar2017@gmail.com

ಅಧಿಸೂಚನೆ ಸಂಖ್ಯೆ ಪಿ.ಎಲ್.ವಿ./11/2025 ದಿನಾಂಕ: 23.09.2025

**ಅಧಿಸೂಚನೆ**

# ಅರೆಕಾಲಿಕ ಕಾನೂನು ಸ್ವಯಂ ಸೇವಕರ ನೇಮಕಾತಿ ಪ್ರಕಟಣೆ

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಚಾಮರಾಜನಗರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ, ಕೊಳ್ಳೇಗಾಲ / ಗುಂಡ್ಲುಪೇಟೆ / ಯಳಂದೂರು, ಇಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರ (ಪಿ.ಎಲ್.ವಿ.) ನೇಮಕಾತಿ ಬಗ್ಗೆ.

ಉಲ್ಲೇಖ: ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಂಖ್ಯೆ 01/ PLV/2025, ದಿನಾಂಕ: 12.09.2025.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಅರೆಕಾಲೀಕ ಕಾನೂನು ಸ್ವಯಂ ಸೇವಕರ ಪರಿಷ್ಕೃತ ಯೋಜನೆ ಅನುಸಾರ ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ರವರ ಉಲ್ಲೇಖಿತ ಪತ್ರದ ಮೇರೆಗೆ ಜನ ಸಾಮಾನ್ಯರಿಗೆ ಸರ್ವರಿಗೂ ನ್ಯಾಯ ಎಂಬ ಪರಿಕಲ್ಪನೆಯಡಿಯಲ್ಲಿ ಜನ ಸಾಮಾನ್ಯರಿಗಾಗಿ, ಅನುಕೂಲಕ್ಕಾಗಿ, ಶೀಘ್ರವಾಗಿ ಹಾಗೂ ತ್ವರಿತವಾಗಿ ನ್ಯಾಯ ಒದಗಿಸಬೇಕೆಂಬ ಆಶಯದಡಿಯಲ್ಲಿ ರಾಜ್ಯ ಪ್ರಾಧಿಕಾರದ ನಿರ್ದೇಶನದನುಸಾರ ಚಾಮರಾಜನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಕೊಳ್ಳೇಗಾಲ, ಗುಂಡ್ಲುಪೇಟೆ ಹಾಗೂ ಯಳಂದೂರು ಗಳಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರ (ಪಿಎಲ್ ವಿ) ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ನೇಮಕಾತಿ ವಿಧಾನ:**

1. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಅರೆಕಾಲೀಕ ಕಾನೂನು ಸ್ವಯಂ ಸೇವಕರ ಪರಿಷ್ಕೃತ ಯೋಜನೆ ಅನುಸಾರ ಸಂದರ್ಶನದ ಮೂಲಕ.

2. **ಅರ್ಹತೆ:**

ಈ ಕೆಳಗಿನ ವರ್ಗದವರು / ಗುಂಪಿನವರು ಅರೆಕಾಲಿಕ ಕಾನೂನು ಸ್ವಯಂ ಸೇವಕರ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ

- ➔ ಶಿಕ್ಷಕರು/ನಿವೃತ್ತ ಶಿಕ್ಷಕರು
- ➔ ಮಾಜಿ ಪಂಚಾಯತ್ ಸದಸ್ಯರು
- ➔ ವಿವಿಧ ಇಲಾಖೆಗಳ ನಿವೃತ್ತ ಸರ್ಕಾರಿ ನೌಕರರು ಮತ್ತು ಹಿರಿಯ ನಾಗರಿಕರು
- ➔ ಕಾನೂನು ನೆರವು ಉಪಕ್ರಮಗಳಿಗೆ ನಿಜವಾಗಿಯೂ ಬದ್ಧರಾಗಿರುವ ಸಮಾಜ ಕಾರ್ಯಕರ್ತರು
- ➔ ಮಹಿಳೆಯರು, ತೃತೀಯ ಲಿಂಗಿಗಳು, ಬುಡಕಟ್ಟು ಸಮುದಾಯಗಳ ವ್ಯಕ್ತಿಗಳು, ಸಮಾಜದ ಅಂಚಿನಲ್ಲಿರುವ ವರ್ಗಗಳು ಮತ್ತು ಇತರ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು

- ಸಾಮಾಜಿಕ ಕಾರ್ಯಕರ್ತರು - ವಿದ್ಯಾರ್ಥಿಗಳು, ಶಿಕ್ಷಕರು
- ಅಂಗನವಾಡಿ ಕಾರ್ಯಕರ್ತೆಯರು
- ವೈದ್ಯರು / ಫಿಜಿಷಿಯನ್
- ವಿದ್ಯಾರ್ಥಿಗಳು ಮತ್ತು ಕಾನೂನು ವಿದ್ಯಾರ್ಥಿಗಳು (ವಕೀಲರಾಗಿ ನೋಂದಾಯಿಸಿಕೊಳ್ಳುವವರೆಗೆ)
- ರಾಜಕೀಯೇತರ, ಸೇವಾ ಕೇಂದ್ರಿತ ಸರ್ಕಾರೇತರ ಸಂಸ್ಥೆಗಳು ಮತ್ತು ಕ್ಲಬ್‌ಗಳ ಸದಸ್ಯರು
- ಸ್ತ್ರೀಶಕ್ತಿ ಸಂಘ, ಮೈತ್ರಿ ಸಂಘಗಳು ಮತ್ತು ಅಂಚಿನಲ್ಲಿರುವ/ದುರ್ಬಲ ಗುಂಪುಗಳು ಸೇರಿದಂತೆ ಇತರ ಸ್ವಸಹಾಯ ಗುಂಪುಗಳ ಸದಸ್ಯರು
- ಉತ್ತಮ ನಡವಳಿಕೆ ಹೊಂದಿರುವ, ಜೈಲುಗಳಲ್ಲಿ ದೀರ್ಘಾವಧಿಯ ಶಿಕ್ಷೆಯನ್ನು ಅನುಭವಿಸುತ್ತಿರುವ ವಿದ್ಯಾವಂತ ಖೈದಿಗಳು
- ಮೃತ ರಕ್ಷಣಾ ಸಿಬ್ಬಂದಿಯ ವಿಧವೆಯರು
- ನಾಗರಿಕ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮಾಜಿ ಸೈನಿಕರು ಅಥವಾ ಅವರ ಅವಲಂಬಿತರು
- ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾ ಸಿಬ್ಬಂದಿಯ ಪತಿ / ಪತ್ನಿ ಅಥವಾ ವಯಸ್ಕ ಮಕ್ಕಳು
- ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ / ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಲ್ಲಿ ಅರೆಕಾಲಿಕಾ ಕಾನೂನು ಸ್ವಯಂ ಸೇವಕರಾಗಿ ಗುರುತಿಸಲು ಸೂಕ್ತವೆಂದು ಭಾವಿಸುವ ಯಾವುದೇ ಇತರ ವ್ಯಕ್ತಿ.

ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಮಿತಿ ಗುರುತಿಸುವ ಇತರೆ ಅರ್ಹ ವ್ಯಕ್ತಿಗಳು. (ಸ್ವೀಕೃತಗೊಂಡ ಅರ್ಜಿಗಳಲ್ಲಿ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬುಡಕಟ್ಟು ಜನಾಂಗ ಹಾಗೂ ಹಿಂದುಳಿದ ವರ್ಗಗಳಿಗೆ ಪ್ರಾಧಾನ್ಯತೆ ನೀಡಲಾಗುವುದು)

3. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ** **08.10.2025 ರ ಸಂಜೆ 05.00 ಗಂಟೆ ವರೆಗೆ**

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08226 - 226022.

4. **ಅರ್ಜಿ ಸಲ್ಲಿಸಬೇಕಾದ ವಿಳಾಸ:**

ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಎಡಿಆರ್ ಕಟ್ಟಡ, ಜಿಲ್ಲಾ ನ್ಯಾಯಾಲಯ ಆವರಣ, ಚಾಮರಾಜನಗರ ಹಾಗೂ ಆಯಾಯ ತಾಲ್ಲೂಕಿನಲ್ಲಿರುವವರು ಸದಸ್ಯ ಕಾರ್ಯದರ್ಶಿಗಳು, ತಾಲ್ಲೂಕು ಕಾನೂನು ಸೇವಾ ಸಮಿತಿಯ ಕಛೇರಿಗಳಾದ ಕೊಳ್ಳೇಗಾಲ / ಗುಂಡ್ಲುಪೇಟೆ / ಯಳಂದೂರು, ಇವರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ.

5. **ಅರ್ಜಿಗಳನ್ನು ಪಡೆಯಬಹುದಾದ ಸ್ಥಳ:**

ಸದರಿ ಹುದ್ದೆಗೆ ಅರ್ಜಿಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿ, ಎಡಿಆರ್ ಕಟ್ಟಡ, ಜಿಲ್ಲಾ ನ್ಯಾಯಾಲಯ ಆವರಣ, ಚಾಮರಾಜನಗರ ಅಥವಾ ತಾಲ್ಲೂಕು ಕಾನೂನು ಸೇವಾ ಸಮಿತಿಯ ಕಛೇರಿಗಳಾದ ಕೊಳ್ಳೇಗಾಲ / ಗುಂಡ್ಲುಪೇಟೆ / ಯಳಂದೂರು ನ್ಯಾಯಾಲಯಗಳ ಸಂಕೀರ್ಣದಲ್ಲಿ ಪಡೆದುಕೊಳ್ಳಬಹುದು ಅಥವಾ ಚಾಮರಾಜನಗರದ ಜಿಲ್ಲಾ ನ್ಯಾಯಾಲಯದ ವೆಬ್ ಸೈಟ್ ನಲ್ಲಿಯೂ ಪಡೆಯಬಹುದಾಗಿರುತ್ತದೆ.

6. **ಸಂಭಾವನೆ:**

ಗೌರವಾನ್ವಿತ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು, ರವರ ನಿರ್ದೇಶನದನುಸಾರ ಗೌರವಧನ ಸೌಲಭ್ಯ ದೊರೆಯುವುದು.

**7. ತರಬೇತಿ:**

ಆಯ್ಕೆಗೊಂಡ ಪಿ.ಎಲ್.ವಿ.ಗಳಿಗೆ ತರಬೇತಿ ನೀಡಲಾಗುವುದು ಹಾಗೂ ಮಾನ್ಯ ರಾಜ್ಯ ಪ್ರಾಧಿಕಾರದ ನಿರ್ದೇಶನದಂತೆ ಪ್ರಾಧಿಕಾರದ ವತಿಯಿಂದ ನಡೆಸಲಾಗುವ ತರಬೇತಿಗಳಿಗೆ ಹಾಜರಾಗಲು ನಿರಾಕರಿಸುವಂತಿಲ್ಲ.

**8. ಅವಧಿ:**

ನೇಮಕಾತಿ ಹೊಂದಿದ ದಿನಾಂಕದಿಂದ ಒಂದು ವರ್ಷದ ತನಕ.

**ಷರತ್ತುಗಳು:**

1. ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿ ಮಾಡತಕ್ಕದ್ದು ಅಪೂರ್ಣ ಅರ್ಜಿಯನ್ನು ನೇಮಕಾತಿ ಸಮಿತಿಯು ತಿರಸ್ಕರಿಸಲು ಬದ್ಧವಾಗಿರುತ್ತದೆ. (ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಗುರುತಿನ ಚೀಟಿಗಳ) ಪ್ರತಿಯನ್ನು ಲಗತ್ತಿಸುವುದು ಕಡ್ಡಾಯ.
2. ಅರ್ಜಿದಾರರ ವಿರುದ್ಧ ಯಾವುದೇ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲು ಇರುವಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
3. ಗೌರವಾನ್ವಿತ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ರಾಷ್ಟ್ರೀಯ ಕಾನೂನು ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವ ಮತ್ತು ಕಾನೂನು ಸಹಾಯ ನೀಡುವ ಉದ್ದೇಶಕ್ಕೆ ಪಿಎಲ್ ವಿಗಳ ನೇಮಕಾತಿ ಮಾಡಲಾಗುತ್ತಿದ್ದು, ನೇಮಕಾತಿ ಪ್ರಕ್ರಿಯೆಯು ಆಯ್ಕೆ ಸಮಿತಿಯ ಅಂತಿಮ ನಿರ್ಧಾರದ ಮೇಲೆ ಅವಲಂಭಿಸಿರುತ್ತದೆ ಹಾಗೂ ಪಿಎಲ್ ವಿಗಳ ನೇಮಕಾತಿ ವಿಷಯದಲ್ಲಿ ಕಾನೂನು ವ್ಯಾಜ್ಯ ಹೂಡಲು ಅಥವಾ ನಿಯಮಗಳಿಗೆ ವ್ಯತಿರಿಕ್ತವಾಗಿ ಹೋರಾಟ ಮಾಡಲು ಅವಕಾಶವಿರುವುದಿಲ್ಲ.

**ಸಾಮಾನ್ಯ ಸೂಚನೆಗಳು:**

1. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು, ಸದರಿ ಹುದ್ದೆಗೆ ಅರ್ಜಿ ನಮೂನೆಯನ್ನು ಚಾಮರಾಜನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಛೇರಿಯಲ್ಲಿ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಯ ಕಛೇರಿಗಳಾದ ಕೊಳ್ಳೇಗಾಲ / ಗುಂಡ್ಲುಪೇಟೆ / ಯಳಂದೂರು ರವರ ಕಛೇರಿಗಳಲ್ಲಿ ಪಡೆದು ಸಲ್ಲಿಸಬಹುದಾಗಿರುತ್ತದೆ.
2. ಲಕೋಟೆ ಮೇಲೆ ಅರೇಕಾಲೀಕ ಕಾನೂನು ಸ್ವಯಂ ಸೇವಕರ ಹುದ್ದೆಗಾಗಿ ಮೇಲ್ಬರಹದೊಂದಿಗೆ ದಿನಾಂಕ: **<u>08.10.2025 ರೊಳಗೆ</u>** ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯವಿರುವ ಎಲ್ಲಾ ಪ್ರಮಾಣ ಪತ್ರಗಳೊಂದಿಗೆ ಇತ್ತೀಚಿನ 2 ಭಾವಚಿತ್ರದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
3. ನೇಮಕಾತಿ ಸಂಬಂಧವಾಗಿ ಸಮಿತಿಯ ನಿರ್ಣಯವು ಅಂತಿಮವಾಗಿರುತ್ತದೆ.
4. ಅರ್ಹ ಅಭ್ಯರ್ಥಿಗಳ ಸಂದರ್ಶನದ ಸಮಯ ಮತ್ತು ಸ್ಥಳವನ್ನು ಪ್ರಾಧಿಕಾರದ ಪ್ರಕಟಣೆಯಲ್ಲಿ ಪ್ರಕಟಿಸುವ ಮೂಲಕ ತಿಳಿಸಲಾಗುವುದು.
5. ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗುವುದು ಹಾಗೂ ಸಂದರ್ಶನದ ಬಗ್ಗೆ ಮಾಹಿತಿ ಬರದಿರುವ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಲ್ಲ ಎಂದು ಭಾವಿಸತಕ್ಕದ್ದು.
6. ಅಭ್ಯರ್ಥಿ ನೇಮಕಾತಿ ಸಮಯದಲ್ಲಿ ಯಾವುದೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅನುಸರಿಸುವುದು ಕಂಡು ಬಂದಲ್ಲಿ ಅಂತಹವರನ್ನು ನೇಮಕಾತಿ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.
7. ನೇಮಕಗೊಂಡ ಅರ್ಹ ಅಭ್ಯರ್ಥಿಗಳ ಕರ್ತವ್ಯ ನಿರ್ವಹಣೆಯಲ್ಲಿ ತೃಪ್ತಿಕರವಾಗದಿದ್ದ ಸಮಯದಲ್ಲಿ ಆಯ್ಕೆ ಪಟ್ಟಿಯಿಂದ ತೆಗೆದು ಹಾಕುವ ಸಂಪೂರ್ಣ ಅಧಿಕಾರ ಪ್ರಾಧಿಕಾರಕ್ಕೆ ಇರುವುದು.
8. ಸದರಿ ನೇಮಕಾತಿಯು ಸಂಪೂರ್ಣ ಅರ್ಹತೆ ಮತ್ತು ತೃಪ್ತಿಯ ಪರೀಕ್ಷೆಯ ಅನ್ವಯ ಅಭ್ಯರ್ಥಿಯ ನೇಮಕಾತಿ ಸಂಪೂರ್ಣ ಸಮಿತಿಯ ನಿರ್ಣಯವಾಗಿರುತ್ತದೆ.

...4...

9. ಕಾರ್ಯನಿರ್ವಹಿಸಲು ಒಂದು ವರ್ಷಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲಾಗುವುದು ಹಾಗೂ ಒಂದು ವೇಳೆ ಪ್ರಾಧಿಕಾರದಲ್ಲಿ ತಮ್ಮ ಕಾರ್ಯವೈಖರಿ ತೃಪ್ತಿಕರ ಹಾಗೂ ಸಮರ್ಪಕವಾಗಿಲ್ಲವೆಂದು ಕಂಡು ಬಂದಲ್ಲಿ ಅರೇ ಕಾಲೀಕ ಕಾನೂನು ಸ್ವಯಂ ಸೇವಕರ ಹುದ್ದೆಯಿಂದ ವಜಾಗೊಳಿಸುವ ಅಧಿಕಾರವನ್ನು ಪ್ರಾಧಿಕಾರ ಹೊಂದಿರುತ್ತದೆ.

10. ನಿಗಧಿತ ದಿನಾಂಕ ಹಾಗೂ ಸಮಯದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

23/09/25

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಾಮರಾಜನಗರ ಜಿಲ್ಲೆ.

G. Prabhavathi, 23/9

ಅಧ್ಯಕ್ಷರು,
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಚಾಮರಾಜನಗರ.